

# ನಾದಮಯ ಈ ರಸ್ತೆಗಳೆಲ್ಲ...!



ಸಂಗೀತದ ನಾದವನ್ನು ಹೊಮ್ಮಿಸುವ ರಸ್ತೆಗಳ ಬಗ್ಗೆ ಕೇಳಿದ್ದೀರಾ? ಜಪಾನ್ ದೇಶದಲ್ಲಿ ಇಂತಹ ಕೆಲವು ಮೆಲೊಡಿ ರಸ್ತೆಗಳಿವೆ. ನೀವು ಕಾರಿನಲ್ಲಿ ಕುಳಿತು ಇಂತಹ ರಸ್ತೆಗಳಲ್ಲಿ ಪಯಣಿಸುತ್ತಿದ್ದರೆ ಸುಶ್ರಾವ್ಯವಾದ ಸಂಗೀತವನ್ನು ಆಸ್ವಾದಿಸಬಹುದು.

ಜಪಾನ್ ದೇಶದ ಇಂಜಿನಿಯರ್ ಶಿಜ಼ಾಶಿನೊಡ ಅವರು ಅಕಸ್ಮಾತ್ ಆಗಿ ಬುಲ್ಡೋಜರ್ ಹಲ್ಲಿನ ಮೊನೆಯಿಂದ ರಸ್ತೆಯಲ್ಲಿನ ಮಾರ್ಕಿಂಗ್ ಅನ್ನು ಕೆತ್ತಿಬಿಟ್ಟರು. ಆನಂತರ ಅವರು ಅದೇ ರಸ್ತೆಯಲ್ಲಿ ಸಾಗುತ್ತಿರುವಾಗ ತಮ್ಮ ಕಾರಿನ ವೈಬ್ರೇಷನ್‌ನಿಂದ ಹೊರ ಹೊಮ್ಮುತ್ತಿರುವ ಸಂಗೀತದ ನಾದವನ್ನು ಕೇಳಿಸಿಕೊಂಡರು. ನಂತರ ಹೊಕ್ಕೈಡೊ ಇಂಡಸ್ಟ್ರಿಯಲ್ ರೀಸರ್ಚ್ ಇನ್‌ಸ್ಟಿಟ್ಯೂಟ್‌ನ ಎಂಜಿನಿಯರ್‌ಗಳ ಬಳಗವೊಂದು 2007ರಲ್ಲಿ, ಶಿನೊಡ ರವರ ಡಿಜೈನ್ ಅನ್ನು ಅಭಿವೃದ್ಧಿಪಡಿಸಿ ಹಲವಾರು ಮೆಲೊಡಿ ರಸ್ತೆಗಳನ್ನು ಜಪಾನ್‌ನಲ್ಲಿ ನಿರ್ಮಿಸಿದರು.

ಈ ರಸ್ತೆಗಳ ಮೇಲ್ಮೈ ಯಲ್ಲಿ ನಿರ್ದಿಷ್ಟವಾದ ಅಂತರದಲ್ಲಿ ಗ್ರೂವ್ (ಹಳ್ಳ) ಗಳನ್ನು ಮಾಡಲಾಗುತ್ತದೆ. ಒಂದು ಗ್ರೂವ್ ಹಾಗೂ ಇನ್ನೊಂದು ಗ್ರೂವ್ ಎಷ್ಟು ದೂರದಲ್ಲಿದೆ ಹಾಗೂ ಎಷ್ಟು ಆಳದಲ್ಲಿದೆ ಎನ್ನುವುದನ್ನು ಅವಲಂಬಿಸಿ, ಕಾರಿನ ಚಕ್ರ ಇದರ ಮೇಲೆ ಸಾಗುತ್ತಿರುವಾಗ ಜೋರಾದ ಅಥವಾ ಮೆಲ್ಲನೆಯ ನಾದ ಹೊಮ್ಮುವಂತೆ ರಸ್ತೆಯ ಡಿಸೈನ್ ಅನ್ನು ಮಾಡಲಾಗುತ್ತದೆ. ಗ್ರೂವ್‌ಗಳು ಹತ್ತಿರವಿದ್ದಷ್ಟೂ ನಾದದ ಸ್ಥಾಯಿ ಹೆಚ್ಚಾಗಿರುತ್ತದೆ ಹಾಗೂ ಕಾರಿನ ವೇಗವೇ ಮಿಶ್ರಣದ ನಿರ್ಣಾಯಕ ಅಂಶವಾಗಿರುತ್ತದೆ.

ಜಪಾನಿನ ವಾಕಾಯಾಮ, ಶಿಜ಼ೌಕಾ, ಗುನ್ಮಾ ಮತ್ತು ಹೊಕ್ಕೈಡೊಗಳಲ್ಲಿ ತಲಾ ಒಂದೊಂದರಂತೆ ಮೆಲೊಡಿ ರಸ್ತೆಗಳಿವೆ. 175 ರಿಂದ 250 ಮೀಟರ್‌ನಷ್ಟು ವಿಸ್ತಾರದಲ್ಲಿರುವ ಈ ರಸ್ತೆಗಳಲ್ಲಿ ಸಾವಿರಾರು ಗ್ರೂವ್‌ಗಳನ್ನು ಕೆತ್ತಲಾಗಿದೆ. ಒಂದು ಬದಿಯಲ್ಲಿ ಮಾರ್ಗ ಸೂಚನೆಗಳಿರುವುದರ ಜೊತೆಗೆ ರಸ್ತೆ ಮೇಲ್ಮೈಯಲ್ಲಿ ಸಂಗೀತ ಸ್ವರಚಿಹ್ನೆಗಳನ್ನು ಬಣ್ಣದಿಂದ ಪೇಂಟ್ ಮಾಡಲಾಗಿದ್ದು, ಇದು ವಾಹನ ಚಾಲಕರಿಗೆ ಮೆಲೊಡಿ ರಸ್ತೆಯ ಬಗ್ಗೆ ಎಚ್ಚರಿಕೆಯನ್ನು ನೀಡುತ್ತದೆ.

■ ವಿನಯ್ ಕುಮಾರ್ ಬಿ.ಎಚ್.